ತನ್ನನ್ನು 'ವಧು' ಎಂದು ಮತ್ತು ಔಲಿಯಾನನ್ನು 'ಪಿಯಾ' ಎಂದು ಕರೆದಿದ್ದಾನೆ.) ಅವನ ಒಂದು ಪದ್ಯ ಹೀಗಿದೆ:

ನಾನು ಸಾಯುತ್ತೇನೆಂದು ಪ್ರತಿಜ್ಞೆ ಮಾಡುತ್ತೇನೆ;
ಆಗಲಾದರೂ ನನ್ನತ್ತ ನಿನ್ನ ದೃಷ್ಟಿ ಬೀಳಬಹುದು.
ನೋಡು, ಈ ಪ್ರೇಮದ ಸಂತೆಯಲ್ಲಿ
ಎಷ್ಟು ಜನ ಸಾವನ್ನಪ್ಪಿದ್ದಾರೆ –ನನ್ನಂತೆ.

ಈ ಬಗೆಯ ಪ್ರೇಮದ ಪರಿಕಲ್ಪನೆಯ ಕಾರಣದಿಂದಲೇ ಖುಸ್ರೋ ಜಾತಿ-ಮತ-ವರ್ಣ-ಲಿಂಗಾದಿಗಳನ್ನು ದಾಟಲು ಸಾಧ್ಯವಾಯಿತು. ಅವನ ಶಿಷ್ಯರಲ್ಲಿ ಹಾಗೂ ಅಭಿಮಾನಿಗಳಲ್ಲಿ ಹಿಂದುಗಳು, ಮುಸ್ಲಿಮರು, ಮೇಲ್ಜಾತಿ-ಕೆಳಜಾತಿಯವರು, ಪುರುಷರು ಹಾಗೂ ಸ್ತ್ರೀಯರು ಇದ್ದರು. ವಿಮರ್ಶಕನೊಬ್ಬನು ಅವನನ್ನು 'ಖಲಂದರ್' ಅಥವಾ 'ಮುಕ್ತಾತ್ಮ' ಎಂದು ಕರೆಯುತ್ತಾನೆ.

ಖುಸ್ರೋನ ಗುರು-ಸಖನಾಗಿದ್ದ ಹಜ಼್ರತ್ ನಿಜಾಮುದ್ದೀನ್ ಔಲಿಯಾ 1325ರಲ್ಲಿ ನಿಧನನಾದನು. ಆಗ ಸುಲ್ತಾನನೊಡನೆ ದೆಹಲಿಯಿಂದ ದೂರವಿದ್ದ ಖುಸ್ರೋ ಈ ಸುದ್ದಿ ತಿಳಿದ ಕೂಡಲೇ ಅಳುತ್ತಾ ಓಡೋಡಿ ಬಂದನು; ಔಲಿಯಾನ ಸಮಾಧಿಯ ಬಳಿ ತನ್ನ ಮುಖಕ್ಕೆಲ್ಲಾ ಕಪ್ಪು ಹಚ್ಚಿಕೊಂಡು ನೆಲದ ಮೇಲೆ ಹೊರಳಾಡುತ್ತಾ ದುಃಖಿಸಿದನು. ಅನಂತರ, ಕೇವಲ ಆರು ತಿಂಗಳುಗಳಲ್ಲಿ ಖುಸ್ರೋ ಕೂಡಾ ಮರಣಹೊಂದಿದನು; ಔಲಿಯಾನ ಸಮಾಧಿಯ ಬಳಿಯೇ ಖುಸ್ರೋನ ಸಮಾಧಿಯನ್ನೂ ಕಟ್ಟಲಾಯಿತು. ಈ ಎರಡೂ ಸ್ಥಳಗಳು ದಕ್ಷಿಣ ಏಷ್ಯಾದ ಎಲ್ಲಾ ಸೂಫಿ ಧರ್ಮಾನುಯಾಯಿಗಳಿಗೆ ಪವಿತ್ರ ಯಾತ್ರಾಸ್ಥಳಗಳಾಗಿವೆ.

## ಖುಸ್ರೋ: ಕೆಲವು ಕವನಗಳು

### ಏತಕ್ಕೆ ನನ್ನನ್ನು ಪರದೇಶಕ್ಕೆ ಮದುವೆ ಮಾಡಿಕೊಟ್ಟೆ?

ನನ್ನ ಪ್ರೀತಿಯ ತಂದೆಯೇ,
ಏತಕ್ಕೆ ನನ್ನನ್ನು ಮದುವೆ ಮಾಡಿ ಕಳಿಸಿದೆ ಪರದೇಶಕ್ಕೆ?
ತಂದೆ, ಅಣ್ಣನಿಗೆ ಕೊಟ್ಟೆ ಒಂದೆರಡು ಅರಮನೆಗಳನ್ನು;
ನನಗೆ ಕೊಟ್ಟೆ ಪರದೇಶವನ್ನು.
ನನ್ನ ಪ್ರೀತಿಯ ತಂದೆ...
ನಾನು ನಿನ್ನ ಸಾಧುಸ್ವಭಾವದ ಹಸು, ತಂದೆ;
ಎಲ್ಲಿಗೆ ಅಟ್ಟಿದರೂ ಅಲ್ಲಿಗೆ ಹೋಗುವ ಹಸು.
ಓ ನನ್ನ ಪ್ರೀತಿಯ ತಂದೆ...

ನಾನಾದರೋ ನೀನು ಬೆಳೆಸಿದ ಬಳ್ಳಿಯ ಹೂವು;
ಮನೆಮನೆಯವರೂ ನನ್ನನ್ನು ಕೇಳುತ್ತಾರೆ.
ಓ ನನ್ನ ಪ್ರೀತಿಯ ತಂದೆ...
ನನ್ನ ಪಲ್ಲಕ್ಕಿ ಮಾಳಿಗೆಯ ಕೆಳಗೆ ಹೋದಾಗ,
ಅಣ್ಣ ದುಃಖದಿಂದ ಮೂರ್ಛೆ ಹೋದ.
ಓ ನನ್ನ ಪ್ರೀತಿಯ ತಂದೆ...

